ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿದ್ಯುತ್ ವಿಭಾಗ, ರಾಜರಾಜೇಶ್ವರಿ ನಗರ ವಲಯ.

(35)

ಸಂಖ್ಯೆ:.ಕಾ.ಪಾ.ಅ/ರಾರಾನವ/ವಿ/ಆ.ಅ/ 56 /2016–17 ಕಾರ್ಯಪಾಲಕ ಅಭಿಯಂತರರ ಕಛೇರಿ (ವಿದ್ಯುತ್)
ರಾಜರಾಜೇಶ್ವರಿ ನಗರ ವಲಯ
ಬೆಂಗಳೂರು, ದಿನಾಂಕ: 01/12/16

ಆಡಳಿತಾತ್ಮಕ ಮಂಜೂರಾತಿ ಪತ್ರ

ಕಾಮಗಾರಿಯ ಹೆಸರು: **Providing street light in BBMP wards of Rajarajeshwarinagar Assembly Constituency (Ward No. 16,17,37,38,42,69,73,129 &160)**

ಅಂದಾಜು ಮೊತ್ತ: 200.00 ಲಕ್ಷಗಳು

****

ಈ ಮೇಲೆ ವಿವರಿಸಿರುವ ಕಾಮಗಾರಿಯ ಅಂದಾಜು ಪಟ್ಟಿಯ ಮೊತ್ತ **ರೂ.200.00** ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಕೋರಿ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂ: ನಅಇ 615 ಎಂ ಎನ್ ವೈ 2015 ದಿ: 01/03/2016 ರ ರೀತ್ಯಾ ಪ್ರಸ್ತಾವನೆಯನ್ನು ವಿಶೇಷ ಆಯುಕ್ತರು (ಯೋ) ರವರ ಮೂಲಕ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ. ಈ ಕಾಮಗಾರಿಯನ್ನು 2016–17 ನೇ ಸಾಲಿನ ಪಾಲಿಕೆ ಆಯವ್ಯಯ ಲೆಕ್ಕಶೀರ್ಷಿಕೆ ಪಿ–2415 ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯಡಿಯಲ್ಲಿ ಮಂಜೂರು ಮಾಡುವ ಮೀಸಲು ನಿಧಿಯಡಿಯಲ್ಲಿ ಮಂಜೂರು ಮಾಡಿ ಜಾಬ್ ಸಂಖ್ಯೆ: 016–17–000001 ಅನ್ನು ಮುಖ್ಯ ಆರ್ಥಿಕ ಅಧಿಕಾರಿಗಳು(ಜೆಎನ್ಎನ್ಯುಆರ್ಎಮ್ರವರು ನೀಡಿರುತ್ತಾರೆ.

ಈ ಮೇಲಿನ ಅಂಶಗಳ ಹಿನ್ನಲೆಯಲ್ಲಿ ಈ ಕಾಮಗಾರಿಗೆ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿ:30.11.2016 ರ ನಡವಳಿ ವಿಷಯ ಸಂಖ್ಯೆ: ವಾ.ಕಾ.ಸ್ಥಾ.ಸ/303/2016–17 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ಹಾಗೂ ಈ ಕಾಮಗಾರಿಯನ್ನು ಮೆ: ಕೆ.ಆರ್.ಐ.ಡಿ.ಎಲ್ ಸಂಸ್ಥೆ ವತಿಯಿಂದ ಕೈಗೊಳ್ಳಲು ಕ್ರಮ ಕೈಗೊಳ್ಳಲು ತೀರ್ಮಾನಿಸಿರುತ್ತಾರೆ.

ಮಾನ್ಯ ಆಯುಕ್ತರು ರವರ ಕಛೇರಿ ಆದೇಶ ಸಂಖ್ಯೆ: ಬಿ12(1)/ಪಿ.ಆರ್/394/2016–17 ದಿ: 01.06.2016 ರಲ್ಲಿ ಕಾರ್ಯಪಾಲಕ ಅಭಿಯಂತರರಿಗೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆಯಾಗಿರುವ ಎಲ್ಲಾ ಮೊತ್ತದ ಅಂದಾಜು ಪಟ್ಟಿಗಳ ಆಡಳಿತಾತ್ಮಕ ಮಂಜೂರಾತಿ ಪ್ರತಿಗೆ ಸಹಿ ಮಾಡಲು ನೀಡಿರುವ ಅಧಿಕಾರ ಪ್ರತ್ಯಾಯೋಜನೆಯ ಅನ್ವಯ ಸದರಿ ಆಡಳಿತಾತ್ಮಕ ಮಂಜೂರಾತಿ ಪ್ರತಿಗೆ ಸಹಿ ಮಾಡಲಾಗಿದೆ. ಮತ್ತು ಆಡಳಿತಾತ್ಮಕ ಅನುಮೋದನೆ ಪುಸ್ತಕದ ಪುಟ ಸಂಖ್ಯೆ 20/21 ಕ್ರಮ ಸಂಖ್ಯೆ 56 ರಲ್ಲಿ ಈ ಕೆಳಗಿನ ಷರತ್ತುಗಳಂತೆ ದಾಖಲಿಸಲಾಗಿದೆ.

ಷರತ್ತುಗಳು:

1) ದರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡೆಟಾ ದರವನ್ನು ತಯಾರಿಸಿ ಅನುಮೋದನೆ ಪಡೆಯುವುದು.
2) ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೊಟೇಶನ್ ಕರೆದು ಅನುಮೋದನೆ ಪಡೆಯುವುದು.
3) ಕೆಲಸದ ಸ್ಥಳದಿಂದ ಸಾಗಣೆ ದೂರಕ್ಕೆ ಅನುಮೋದನೆ ಪಡೆಯುವುದು.
4) ಮೇಲಿನ ಕೆಲಸದ ವೆಚ್ಚವನ್ನು ಉಪ ಅನುದಾನದಡಿಯಲ್ಲಿ ಭರಿಸುವುದು.
5) ವಿನ್ಯಾಸಗಳನ್ನು ಸಂಬಂಧಪಟ್ಟ ಮೇಲಾಧಿಕಾರಿಗಳಿಂದ ಅನುಮೋದಿಸಿಕೊಂಡು ಕಾರ್ಯಗತಗೊಳಿಸುವುದು.

ಕಾರ್ಯಪಾಲಕ ಅಭಿಯಂತರರು (ವಿದ್ಯುತ್)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ರಾಜರಾಜೇಶ್ವರಿನಗರ ವಲಯ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ.

1) ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು. ರವರ ಮಾಹಿತಿಗಾಗಿ,
2) ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು. ರವರ ಮಾಹಿತಿಗಾಗಿ,